OS No. 79/2018

DW-1

**(ಇಂದು ದಿಃ 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ.NR ವಕೀಲರಿಂದಃ-</u>**

ಚಂದ್ರಪ್ಪ ತಂದೆ ಭೀಮಪ್ಪ ಬೇಜ್ಜ ರವರು ವಾದಿಯರು, ನನಗೆ ಮತ್ತು 3ನೇ ಪ್ರತಿವಾದಿಗೆ ತಂದೆ ಎಂದರೆ ಸರಿ. ನನ್ನ ತಂದೆ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ 1993 ರಲ್ಲಿ ನಿವೃತ್ತಿಯಾಗಿದ್ದಾರೆ. ನನ್ನ ತಂದೆ 23.04.2018 ರಂದು ತೀರಿ ಹೋದರು ಎಂದರೆ ಸರಿ. ನನ್ನ ತಂದೆ ಅನಾರೋಗ್ಯದಿಂದ ತೀರಿ ಹೋದರು ಎಂದರೆಸರಿ . ನನ್ನ ತಂದೆ ತೀರಿ ಹೋಗುವ 4 – 5 ತಿಂಗಳ ಮುಂಚಿನಿಂದಿದ ಅವರಿಗೆ ಏನು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ, ನನ್ನ ತಂದೆಗೆ ಕಾಲು ಮುರಿದಿತ್ತು . ಕಾಲು ಮುರಿದು 6 ತಿಂಗಳಿಗೆ ತೀರಿ ಹೋದರು . ಕಾಲು ಮುರಿದಾಗಿನಿಂದ ಮನೆಯಲ್ಲಿ ಇರುತ್ತಿದ್ದರು . ಕಾಲು ಮುರಿದಾಗಿನಿಂದ ನನ್ನ ತಂದೆ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲನ ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಮೂಳೆ ಸರ್ಜರಿ ಆಗಿಲ್ಲ ಎಂದರೆ ಸರಿಯಲ್ಲ, ದಾವಾ ಐಟೆಮ್ ನಂಬರ 1 ಮತ್ತು 2 ಮಾತ್ರ ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ತನ್ನ ಸರಕಾರಿ ಸೇವೆಯಿಂದ ಬಂದ ಆಧಾಯದಿಂದ ದಾವಾ ಐಟೆಮ್ ನಂಬರ 3 ರಿಂದ 7 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ದಾವಾ ಐಟೆಮನಂಬರ 8 ನ್ನು ನನ್ನ ತಂದೆ ನಿವೃತ್ತಿಯಾದ ನಂತರ ಆತನ ನಿವೃತ್ತಿ ಸೇವ ಸೌಲಬ್ಯದ ಹಣದಿಂದ ಖರೀದಿ ಮಾಡಿದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಐಟೆಮ್ ನಂಬರ 9 ಮತ್ತು 10 ನ್ನು ನಾನು 16 ಮತ್ತು 19 ವರ್ಷದವನಿದ್ದಾಗ ನನ್ನ ತಂದೆ ನನ್ನ ಹೆಸರಿಗೆ ಅವರ ಹಣದಿಂದ ಖರೀದಿ ಮಾಡಿದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ತಾಯಿ ಅವಳ ತವರು ಮನೆಯಿಂದ ಬಂದ ಹಣದಿಂದ ನನ್ನ ಹೆಸರಿಗೆ ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. ದಾವಾ ಐಟೆಮ್ ನಂಬರ 11 ಪಂಚಯತಿಯಲ್ಲಿ ನಡೆದ ಹರಾಜಿನಲ್ಲಿ ನನ್ನ ತಂದೆ ನನ್ನ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ನಾನು ನನ್ನ ಪ್ರತಿವಾದ ಪತ್ರದಲ್ಲಿ ದಾವಾ ಐಟೆಮ್ ನಂಬರ 11 ನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ ಎಂದು ಒಪ್ಪಿ ಕೊಂಡಿದ್ದೇನೆ ಎಂದರೆ ಸರಿಯಲ್ಲ, ತದಾನಂತರ ದಾವಾ ಐಟೆಮ್ ನಂಬರ 11 ನ್ನು ನನ್ನ ತಂದೆ ಖರೀದಿಸಿಲ್ಲ ನಾನೇ ಖರೀದಿಸಿದ್ದು ಎಂದು ತಿದ್ದು ಪಡಿಗೆ ಸಲ್ಲಿಸಿದ್ದೆ ಎಂದರೆ ಸರಿ.

ದಾವಾ ಐಟೆಮ್ ನಂಬರ 11 ರಲ್ಲಿ ವಾದಿಯರಿಗೆ ಭಾಗ ಕೋಡಬಾರದು ಎಂದು ತಂದೆ ಖರಿದಿಸಿಲ್ಲ ನಾನು ಖರೀದಿಸಿದ್ದೇನೆ ಎಂದು ಸುಳ್ಳು ತಿದ್ದು ಪಡಿ ಮಾಡಿಕೊಂಡೇ ಎಂದರೆ ಸರಿಯಲ್ಲ, ದಾವಾ ಐಟೆಮ್ ನಂಬರ 12 ರ ಪ್ಲಾಟನ್ನು ನನ್ನ ತಂದೆ 1993 ರಲ್ಲಿ ನಿವೃತ್ತಿಯಿಂದ ಬಂದ ಹಣದಿಂದ ನನ್ನ ಹೆಸರಿಗೆ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ಅದರ ಮೇಲೆ ಮನೆ ಕಟ್ಟಲು ನನ್ನ ತಂದೆಯೇ ಪೂರ್ತಿ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ಸದರಿ ಮನೆ ಕಟ್ಟಲು ನಾನು ಮಾಡಿದ್ದ ಸಾಲವನ್ನು ನನ್ನ ತಂದೆ ಆತನಿಗೆ ಪ್ರತಿ ತಿಂಗಳು ಬರುತ್ತಿದ್ದ ನಿವೃತ್ತಿ ವೇತನದಿಂದ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾನು ನನ್ನ ತಂದೆಯಿಂದ ಚೆಕ್ ಮೂಲಕ ನಿವೃತ್ತಿ ಹಣ ಪಡೆದುಕೊಂಡು ಚೆಕ್ ಮೂಲಕ ಸಾಲ ಪಾವತಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ, ಪೂರ್ತಿ ಸಾಲವನ್ನು ನನ್ನ ತಂದೆ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ,

ದಾವಾ ಐಟೆಮ್ ನಂಬರ 11 ರ ಪಶ್ಚಿಮಕ್ಕೆ ನನ್ನ ಹೆಂಡತಿಂಹು ಹೆಸರಿಗೆ ಪ್ಲಾಟ್ ಖರೀದಿ ಮಾಡಿದ್ದೇನೆ ಎಂದರೆಸರಿ. ನಾನು ತಾಂಡೂರಿನಲ್ಲಿ ನನ್ನ ಹೆಂಡತಿಯ ಹೆಸರಲ್ಲಿ ಆಸ್ತಿ ಮಾಡಿದ್ದೇನೆ ಎಂದರೆ ತಾಂಡೂರಿನಲ್ಲಿ ನನ್ನ ಹೆಂಡತಿ ಹೆಸರಿನಲ್ಲಿ ಒಂದು ಪ್ಲಾಟ್ ಇದೆ ಎಂದದು ಹೇಳುತ್ತಾರೆ. ಅದನ್ನು ನನ್ನ ಮಾವ ಕೊಟ್ಟ ಹಣದಿಂದ ನನ್ನ ಹೆಂಡತಿ ಹೆಸರಿಗೆ ಖರೀದಿ ಮಾಡಿದ್ದೇವೆ.

1ನೇ ವಾದಿಯ ಗಂಡ 1991 ರಲ್ಲಿ ತೀರಿ ಹೋದರು ಎಂದರೆ ಸರಿ. ಗಂಡ ತೀರಿ ಹೋದ ನಂತರ 1 ನೇ ವಾದಿ ಅಡಕಿಗೆ ಬಂದು ವಾಸವಿದ್ದರು ಎಂದರೆ ಸರಿಯಲ್ಲ, 1 ನೇ ವಾದಿ ಅವಳ ಗಂಡನ ತಂದೆ ಮತ್ತು ಕಟುಂಬದ ವಿರುದ್ಧ ವಿಭಾಗ ಕೋರಿ ದಾವೆ ಸಲ್ಲಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ, ಅದು ಗೌರವಾನ್ವಿತ ಉಚ್ಚನ್ಯಾಯಾಲಯದವರೆಗೆ ಜಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ, 1ನೇ ವಾದಿ ಸದರಿ ದಾವೆಗೆ ಹಾಜರಾಗಲು ನ್ಯಾಯಾಲಯಕ್ಕೆ ಬಂದಾಗ ಅವಳ ಬೇಟಿಗೆ ನಾನು ಬರುತ್ತಿದ್ದೆ ಎಂದರೆ ಸರಿಯಲ್ಲ, ಸದರಿ ದಾವೆ ರಾಜಿ ಯಾಗಿ ಅದರಲ್ಲಿ 1ನೇ ವಾದಿ ಹಣ ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ, ಸದರಿ ದಾವೆ ನಡೆದಾಗ ನಾನು ಊರಿಗೆ ಹೋಗುವುದು ಮತ್ತು ಕುಟುಂಬದ ಸದಸ್ಯರ ಜೊತೆ ಮಾತನಾಡುವುದು ಮಾಡುತ್ತಿರಲಿಲ್ಲ, ಸಾಕ್ಷಿ ಮುಂದುವರೆದುಜ ನಾನು 15 ದಿನಕ್ಕೊಮ್ಮೆ

ಸೇಡಂ ನಿಂದ ಅಡಕಿಗೆ ಹೋಗಿ ಬರುತ್ತಿದ್ದೆ ಎಂದು ಹೇಳುತ್ತಾರೆ. 1991 ರಿಂದ 1 ನೇ ವಾದಿಯ ಮತದಾರರ ಚೀಟಿ , ಪಡಿತರ ಚೀಟಿ ದಾವಾ ಐಟೆಮ ನಂಬರ 8 ರ ಮನೆಯ ವಿಳಾಸಕ್ಕೆ ಇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಾವಾ ಐಟೆಮ ನಂಬರ 8 ರಲ್ಲಿಃ ನ ಮನೆ ಬಿದ್ದು ಹೋಗಿ 50 ವರ್ಷ ಆಗಿದೆ ಎಂದು ಹೇಳುತ್ತಾರೆ. 1 ನೇ ವಾದಿ ಗುಂಡೇಪಲ್ಲಿಯಲ್ಲಿ ಯಾರ ಮನೆಯಲ್ಲಿ ವಾಸವಿದ್ದರು ಎಂದು ದಾಖಲಾತಿ ಹಾಜರುಪಡಿಸಿಲ್ಲ. 2018 ರವರೆಗೆ ನಾನು 1ನೇ ವಾದಿ ಮಾತಾನಾಡುತ್ತಿದ್ದೇವು. 1ನೇ ಮದುವೆ ಯಾದಾಗಿನಿಂದ ನಾನು ಯಾವತ್ತು ಗುಂಡೇಪಲ್ಲಿಗೆ ಹೋಗಿಲ್ಲ, ಗಂಡ ತೀರಿ ಹೋದಾಗಿನಿಂದ 1ನೇ ವಾದಿ ಗುಂಡೇಪಲ್ಲಿಯಲ್ಲಿ ವಾಸವಿರದ ಕಾರಣ ನಾನು ಹೋಗಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ತಾಯಿ ಮತ್ತು 1ನೇ ವಾದಿ ದಾವಾ ಐಟೆಮ್ ನಂಬರ 6 ರಲ್ಲಿ ಒಟ್ಟಿಗೆ ವಾಸವಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 1ನೇ ವಾದಿ ಬಂದು ಹೋಗಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. 1991 ರಿಂದ 1 ನೇ ವಾದಿಯ ಮತದಾರರ ಚೀಟಿ , ಪಡಿತರ ಚೀಟಿ ದಾವಾ ಐಟೆಮ ನಂಬರ 6 ರ ಮನೆಯ ವಿಳಾಸಕ್ಕೆ ಇವೆ ಎಂದರೆ ಸರಿಯಲ್ಲ. ಹೇಗಾದರು ಮಾಡಿ 1ನೇ ವಾದಿಯನ್ನು ಮನೆಯಿಂದ ಹೊರ ಹಾಕಬೇಕೆಂದು ನಾನು ವಾಸವಿರುವ ಮನೆ ಸೇಡಂ ನಲ್ಲಿದ್ದರು ಅಡಕಿಯಲ್ಲಿ ವಾಸ ಮಾಡಲು ಆರಂಭ ಮಾಡಿದೆ ಎಂದರೆ ಸರಿಯಲ್ಲ, ನನ್ನ ಕಿರಿಕಿರಿ ಯಿಂದಾಗಿ 1ನೇ ವಾದಿ ಆಕೇಯ ಎಲ್ಲಾ ಸಾಮಾನುಗಳನ್ನು ಮನೆಯಲ್ಲಿ ಬಿಟ್ಟು ದಿನಾಂಕ 16.05.2018 ರಂದು ಮನೆ ಬಿಟ್ಟು ಹೊರ ಹೋದರು ಎಂದರೆ ಸರಿಯಲ್ಲ, ಆಗ ವಾದಿಯರು ಭಾಗ ಕೇಳಿದರು ಎಂದರೆ ಸರಿಯಲ್ಲ, ನಾನು ನನ್ನ ತಾಯಿಗೆ ಆಸ್ತಿಗಳನ್ನು ಅವಳ ಹೆಸರಿಗೆ ಮಾಡಿಕೊಂಡು ನನಗೆ ದಾನ ಪತ್ರ ಮಾಡಿಕೊಡುವಂತೆ ಒತ್ತಾಯ ಮಾಡುತ್ತಿರುವ ಸಂಗತಿ ಮಾದಿಯರಿಗೆ ಗೊತ್ತಾಗಿ ಅವರು ಈ ದಾವೆ ಸಲ್ಲಿಸಿದರು ಎಂದರೆ ಸರಿಯಲ್ಲ.

1989 ರಿಂದ 1993 ರವರೆಗೆ ಕೇಂದ್ರ ಸರಕಾರದ ಅರೆ ಸರಕಾರಿ ನಿಗಮದಲ್ಲಿ ಕೆಲಸ ಮಾಡಿದೆ. ನಂತರ 1996 ರವರಗೆ ಮಾತೃ ಚಾಯ ಪಿ. ಯು. ಕಾಲೇಜಿನಲ್ಲಿ ತತ್ಕಾಲಿಕ ಶಿಕ್ಷಕರಾಗಿ ಕೆಲಸ ಮಾಡಿದ್ದೇನೆ. 1996 ರವರೆಗೆ ನನ್ನ ಅಧಾಯ ನನ್ನ ಖರ್ಚಿಗೆ ಸರಿಯಾಗುತ್ತಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆಗ ನಾನು LIC

ಏಜೇಂಟು ಆಗಿದ್ದೆ ಮತ್ತು ಟುಷ್ಷೇನ್ ಹೇಳುತ್ತಿದ್ದೆ ಎಂದು ಹೇಳುತ್ತಾರೆ. ನನ್ನ ತಂದೆ ತೀರಿ ಹೋಗುವವರೆಗೆ ದಾವಾ ಆಸ್ತಿಗಳನುವ್ನ ನನ್ನ ತಂದೆ ಮತ್ತು 1ನೇ ವಾದಿ ನೋಡಿಕೊಳ್ಳು ತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ನೋಡಿಕೊಳ್ಳುತ್ತಿದ್ದೆ ಎಂದು ಹೇಳುತ್ತಾರೆ. ನನ್ನ ತಂದೆ ತಾಯಿಯನ್ನು 1ನೇ ವಾದಿ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, ವಾದಿಯರು ಮತ್ತು ನಾವು ದಾವಾ ಆಸ್ತಿಗಳು ಜಂಟಿ ಸ್ವಾ ದೀನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ತಂದೆಯನ್ನು ರೋಹಿತ ರಡ್ಡಿ ನೋಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ತಂದೆಯನ್ನು ಆಸ್ಪತ್ರೆಗೆ ಮತ್ತು ನಿವೃತ್ತಿ ವೇತನ ತರಲು 1ನೇ ವಾದಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ . ಸಾಕ್ಷಿ ಮುಂದುವರೆದು ನಾನು ಹೋಗುತ್ತಿದ್ದೆ ಮತ್ತು ನನ್ನ ಮಗ ಕೂಡ ಹೋಗುತ್ತಿದ್ದ ಎಂದು ಹೇಳುತ್ತಾರೆ.

**( ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**